# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-2119/2017/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:22-02-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಎಂ.ಜೆ. ಜಯಾನಂದಸ್ವಾಮಿ, ವಾಸ: ನೇಗೆಯವರ ಬೀದಿ, ಮಾಗಡಿ, ರಾಮನಗರ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಎಂ.ಜೆ. ಜಯಾನಂದಸ್ವಾಮಿ, ವಾಸ: ನೇಗೆಯವರ ಬೀದಿ, ಮಾಗಡಿ, ರಾಮನಗರ ಜಿಲ್ಲೆ **(ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ)** (1) ಶ್ರೀ ಹೆಚ್.ಆರ್. ಶಂಕರ, ಪ್ರಭಾರ ಮುಖ್ಯಾಧಿಕಾರಿಗಳು, ಪುರಸಭೆ, ಮಾಗಡಿ, ರಾಮನಗರ ಜಿಲ್ಲೆ (2) ಶ್ರೀ ನಾಗೇಂದ್ರ ಲೆಕ್ಕಿಗರು, ಪುರಸಭೆ, ಮಾಗಡಿ, ರಾಮನಗರ ಜಿಲ್ಲೆ ಮತ್ತು (3)ಶ್ರೀಮತಿ ಲಕ್ಷ್ಮೀದೇವಮ್ಮ, ಶಿಶು ವಿಹಾರ ಶಿಕ್ಷಕಿ/ ವಿಷಯ ನಿರ್ವಾಹಕರು ಪುರ ಸಭೆ, ಮಾಗಡಿ, ರಾಮನಗರ ಜಿಲ್ಲೆ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ಇವರುಗಳ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ದೂರುದಾರರು ತಾವು ಮಾಗಡಿ ತಾಲ್ಲೂಕಿನ ಸಂಪಾದಕರ ಸಂಘದ ಅಧ್ಯಕ್ಷರಾಗಿದ್ದು, ಟಿ.ಎಂ.ಸಿ., ಮಾಗಡಿ, ಇವರ ಮುಂದೆ ಅರ್ಜಿ ಸಲ್ಲಿಸಿ ತಮ್ಮ ಸಂಘವು ಎಲ್ಲಾ 12 ಟಿ.ಎಂ.ಸಿ ಮತ್ತು ಸಿ.ಎಂ.ಸಿ ಗಳಲ್ಲಿ ರಾಮನಗರ ಮತ್ತು ಬೆಂಗಳೂರು ಟೌನ್ ನಗರ ಜಿಲ್ಲೆಯಲ್ಲಿ ಆಡಳಿತವು ಏಕೆ ಕುಂಠಿತವಾಗುತ್ತಿದೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ ಆಡಳಿತ ವ್ಯವಸ್ಥೆಯ ಸುಧಾರಣೆಗೆ ಪ್ರಾಮಾಣಿಕ ಯತ್ನ ನಡೆಸಬೇಕೆಂದು ಕೋರಿಕೊಂಡಾಗ ಸಿ.ಎಂ.ಸಿ. ಸಾಮಾನ್ಯ ಸಭೆಯಲ್ಲಿ ರೂ.60,000/- ಗಳನ್ನು ಸಹಾಯ ಧನವನ್ನಾಗಿ ಕೊಡಲು ತೀರ್ಮಾನಿಸಲಾಗಿತ್ತು, ಆದರೆ ದಿನಾಂಕ: 9-6-2017 ರ ಸಾಮಾನ್ಯ ಸಭೆಯ ವಿಷಯ ಸಂ:36/3 ಅಡಿಯಲ್ಲಿ ಆಗಿದ್ದ ಸರ್ವಾನುಮತದ ತೀರ್ಮಾನವನ್ನು ಧಿಕ್ಕರಿಸಿ ಕೇವಲ ರೂ.25,000/- ಗಳ ಚೆಕ್ ಅನ್ನು ನೀಡಿರುತ್ತಾರೆ. ಉಳಿದ ಹಣವನ್ನು ಕೊಡುವಂತೆ ಕೋರಿ ಅರ್ಜಿ ಸಲ್ಲಿಸಿದರೂ ಸಹ ಹಣವನ್ನು ಕೊಟ್ಟಿಲ್ಲ. ಪುರಸಭೆಯ ನಿಧಿಯನ್ನು ಅನರ್ಹರಿಗೆ ಬೇಕಾಬಿಟ್ಟಿಯಾಗಿ ಹಂಚುತ್ತಿದ್ದಾರೆ. ಆಡಳಿತ ವ್ಯವಸ್ಥೆ ಸುಧಾರಿಸಲು ಸದುದ್ದೇಶದಿಂದ ಮಾಡುತ್ತಿರುವ ಕೆಲಸಕ್ಕೆ ಸಹಾಯ ಧನ ನೀಡಲು

ಮೀನಾಮೇಷ ಎಣಿಸುತ್ತಿರುವುದರಿಂದ ಎದುರುದಾರರ ವಿರುದ್ದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2017-18ನೇ ಸಾಲಿನ ಆಯವ್ಯಯದಲ್ಲಿ ಇತರೇ ವಂತಿಕೆಗಳಿಗೆ ಕಾಯ್ದಿರಿಸದ ಮೊತ್ತ ರೂ.50,000/- ಗಳು ಆಗಿತ್ತು. ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರ ಅಪ್ಪಣಿ ಮೇರೆಗೆ ವಿಶೇಷ ಸಂ:36/3 ರಲ್ಲಿ ಚರ್ಚಿಸಿ ಸಭೆಯು ಅಧ್ಯಯನ ಪ್ರವಾಸ ಕೈಗೊಳ್ಳಲು ಸಂಘದ ಆರ್ಥಿಕ ಮುಗ್ಗಟ್ಟಿನ ಕಾರಣದಿಂದಾಗಿ ರೂ.25,000/- ಗಳನ್ನು ಮಾತ್ರ ಪುರಸಭಾ ನಿಧಿಯಿಂದ ಭರಿಸಬಹುದು ಅಂತ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಆದ್ದರಿಂದ, ದೂರನ್ನು ಮುಕ್ತಾಯಗೊಳಿಸಲು ಕೋರಿಕೊಂಡಿದ್ದಾರೆ.

(ಬಿ) 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 1ನೇ ಎದುರುದಾರರ ಆಕ್ಷೇಪಣೆಗಳನ್ನು ಅಳವಡಿಸಿಕೊಂಡಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸಾಮಾನ್ಯ ಸಭೆಯಲ್ಲಿ ಮನವಿ ಪತ್ರವನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದು ಸಭೆಯು ಕೈಗೊಳ್ಳುವ ನಿರ್ಣಯದಂತೆ ಕ್ರಮ ವಹಿಸಲಾಗುವುದು ಅಂತ ಮುಖ್ಯಾಧಿಕಾರಿಗಳು ತಿಳಿಸಿದ್ದರು. ಸರ್ವಾನುಮತದ ತೀರ್ಮಾನವನ್ನು ಕೈಗೊಂಡು ರೂ.60,000/- ಗಳನ್ನು ಕೊಡಲು ತೀರ್ಮಾನಿಸಲಾಗಿತ್ತು. ಹೀಗಿರುವಾಗ ಸದರಿ ಬಾಬ್ತಿಗಾಗಿ ಕಾಯ್ದಿರಿಸಿದ ಮೊತ್ತ ಇತರೇ ವಂತಿಕೆಗಳಲ್ಲಿ ರೂ.50,000/- ಎನ್ನುವುದು 1ನೇ ಎದುರುದಾರರಿಗೆ ಅರಿವಿರಲಿಲ್ಲವೇ. 2 ಮತ್ತು 3ನೇ ಎದುರುದಾರರಿಗೆ ಸಹ ಅರಿವಿರಲಿಲ್ಲವೇ. 3 ಜನ ಎದುರುದಾರರು ದುರುದ್ದೇಶದಿಂದ ಪೂರ್ವಾಗ್ರಹ ಪೀಡಿತ ಅಕ್ರಮ ಎಸಗಿದ್ದಾರೆ. ಕಾನೂನುಬಾಹಿರವಾಗಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಪತ್ರಕರ್ತರಿಗೆ ಪುರಸಭೆಯಿಂದ ಆರ್ಥಿಕ ನೆರವು ಕೊಡಿಸುತ್ತಾರೆ. ನಿರ್ಣಯ ಪುಸ್ತಕದಲ್ಲಿ ಅನಧಿಕೃತ ತಿದ್ದುಪಡಿಯನ್ನು ಮಾಡುತ್ತಾರೆ. ಕರ್ನಾಟಕ ಸರ್ಕಾರದ ನಡುವಳಿಗಳಿಗೆ ನನ್ನ ದೂರಿಗೂ ಏನು ಸಂಬಂಧವಿಲ್ಲ. ಪುರಸಭೆಯ ನಿರ್ಣಯ ಪುಸ್ತಕವನ್ನು ಪರಿಶೀಲನೆ ಮತ್ತು ಪರಾಮರ್ಶೆಗಾಗಿ ಹಾಜರುಪಡಿಸುವಂತೆ ಎದುರುದಾರರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

Sd/- 2

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಹಾಜರುಪಡಿಸಿರುವ ದಿನಾಂಕ: 9-6-2017 ರ ಸಾಮಾನ್ಯ ಸಭೆ 4/2017-18 ರಲ್ಲಿ ರೂ.60,000/- ಗಳನ್ನು ಪುರಸಭಾ ನಿಧಿಯಿಂದ ಅಧ್ಯಯನ ಪ್ರವಾಸಕ್ಕಾಗಿ ಭರಿಸಬಹುದು ಅಂತ ಸರ್ವಾನುಮತದಿಂದ ತೀರ್ಮಾನಿಸಿರುವುದು ಕಂಡುಬರುತ್ತದೆ. ಆದರೆ ಟಿಪ್ಪಣಿ ಮತ್ತು ಆದೇಶದ ಪುಟದಲ್ಲಿ ಆಯವ್ಯಯದಲ್ಲಿ ಎಷ್ಟು ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ ಎನ್ನುವ ಬಗ್ಗೆ ಸ್ಥಳವನ್ನು ಖಾಲಿ ಬಿಟ್ಟಿದ್ದಾರೆ. ನಂತರ ಅದೇ ನಿರ್ಣಯವನ್ನು ಅದೇ ನಡವಳಿಯಲ್ಲಿ ರೂ.25,000/- ಗಳನ್ನು ಭರಿಸಬಹುದು ಎಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಅಂತ ಎದುರುದಾರರು ಸಲ್ಲಿಸಿರುವ ದಾಖಲೆಯಿಂದ ಕಂಡುಬರುತ್ತದೆ.

6. 1ನೇ ಎದುರುದಾರರಿಗೆ ಮೂಲ ನಿರ್ಣಯ ಪುಸ್ತಕವನ್ನು ಟಿಪ್ಪಣಿಗಳ ಸಮೇತ ಹಾಜರುಪಡಿಸುವಂತೆ ನಿರ್ದೇಶಿಸಲಾಗಿತ್ತು.

(ಎ) ದಿನಾಂಕ: 8-1-2018 ರಂದು 1 ಮತ್ತು 2ನೇ ಎದುರುದಾರರು ಖುದ್ದು ಹಾಜರಾಗಿ ಮೂಲ ನಿರ್ಣಯ ಪುಸ್ತಕ ಮತ್ತು ಟಿಪ್ಪಣಿಗಳನ್ನು ಹಾಜರುಪಡಿಸಿದ್ದಾರೆ. ದೂರುದಾರರು ಹಾಜರುಪಡಿಸಿರುವ ದಾಖಲೆಗಳೊಂದಿಗೆ ಅವುಗಳನ್ನು ತಾಳೆ ಹಾಕಿ ನೋಡಿದಾಗ, ಕಛೇರಿ ಟಿಪ್ಪಣಿಯಲ್ಲಿ ರೂ.60,000/- ಇರುವುದನ್ನು ರೂ.25,000/- ಅಂತ ಬದಲಾವಣೆ ಮಾಡಲಾಗಿದೆ. ಕಛೇರಿ ಟಿಪ್ಪಣಿಯಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನಂತರ ರೂ.50,000/- ಗಳು ಅಂತ ಭರ್ತಿ ಮಾಡಲಾಗಿದೆ. ಸಾಮಾನ್ಯ ಸಭೆಯ ಠರಾವಿನಲ್ಲಿಯೂ ಸಹ ರೂ.60,000/- ಗಳು ಇದ್ದುದ್ದನ್ನು ರೂ.25,000/- ಅಂತ ಚಿತ್ತು-ಕಾಟು ಮಾಡಲಾಗಿದೆ. ಠರಾವು ಪುಸ್ತಕದಲ್ಲಿ ಟೈಪ್ ಮಾಡಿ ಮುದ್ರಿಸಿರುವ ಠರಾವುಗಳನ್ನು ಅಂಟಿಸಲಾಗಿದೆ. ಅಧ್ಯಕ್ಷರು, ಮುಖ್ಯಾಧಿಕಾರಿಗಳು ಮತ್ತು ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರ ಸಹಿಗಳನ್ನು ತೆಗೆದುಕೊಂಡು ಬರವಣಿಗೆಯಲ್ಲಿ ಇಡಬೇಕಾದ ಠರಾವು ಪುಸ್ತಕದಲ್ಲಿ ಇಡದೇ ಇರುವುದು ಕಂಡುಬಂದಿದೆ. ಮೂಲ ವಿವಾದಿತ ಕಛೇರಿ ಟಿಪ್ಪಣಿ ಮತ್ತು ಆದೇಶದ ಮೂಲ ಪ್ರತಿಯ ಝರಾಕ್ಸ್ ನಕಲು ಹಾಗೂ ಠರಾವು ಪುಸ್ತಕ ಸಂ:36/1 ರಿಂದ 36/4 ರವರೆಗಿನ ಪುಟಗಳನ್ನು ತೆಗೆದುಕೊಂಡು ಮುಖ್ಯಾಧಿಕಾರಿಗಳ ಸಹಿಯನ್ನು ಪಡೆಯಲಾಗಿದೆ. 1 ರಿಂದ 3ನೇ ಎದುರುದಾರರು ತಮ್ಮ ಕಛೇರಿ ಟಿಪ್ಪಣಿ ಮತ್ತು ಠರಾವು ಪುಸ್ತಕಗಳಲ್ಲಿ ತಿದ್ದುಪಡಿ ಮಾಡಿ ಮತ್ತು ಚಿತ್ತು-ಕಾಟುಗಳನ್ನು (Tampering) ಮಾಡಿರುತ್ತಾರೆ.

Sd/-

7. ಮಾಗಡಿ ಪುರಸಭೆ, ಕಛೇರಿಯಲ್ಲಿ ಠರಾವು ಪುಸ್ತಕವನ್ನು ಬರವಣಿಗೆಯಲ್ಲಿಟ್ಟು ಠರಾವು ಆದ ನಂತರ, ಯಾವುದಾದರೂ ಬದಲಾವಣೆ ಮಾಡಬೇಕಾದರೆ ಅಥವಾ ರದ್ದುಪಡಿಸಬೇಕಾದಲ್ಲಿ **Karnataka Municipalities Act-1964 Sec.57 ರಲ್ಲಿ ಹೇಳಿರುವಂತೆ Modification and cancellation of resolutions.—No resolution of a municipal council shall be modified or cancelled within three months after the passing thereof, except by a resolution passed by not less than one-half 1964: KAR. ACT 22] Municipalities 661 of the total number of councillors at a general meeting, whereof notice shall have been given, fulfilling the requirements of section 48 and setting forth fully the resolution which it is proposed to modify or cancel at such meeting, and the motion or proposition for the modification or cancellation of such resolution** ಕ್ರಮ ವಹಿಸಬೇಕಾಗುರತ್ತದೆ. ಆದ್ದರಿಂದ, ಸದರಿ ಕಲಂ 57 ರಲ್ಲಿ ಹೇಳಿರುವಂತೆ ನಿರ್ದೇಶನಗಳನ್ನು ಪಾಲಿಸಲು, ನಿಯಮಾವಳಿಗಳಂತೆ ಠರಾವು ಪುಸ್ತಕವನ್ನು ಇಡಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ ಎದುರುದಾರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 22/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ